ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾಸನ
ಸ್ಪೆಷಲ್.ಕೇಸ್.ನಂ. 28/2010

ಚಾ.ಸಾ-2 ಪ್ರಾ.ಸಾ -19 ದಿನಾಂಕಃ 25.06.2018
ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಹೆಸರು | : | ಡಾ. ರತ್ನಾಕರ |
| ತಂದೆಯ ಹೆಸರು | : | ಲೇಟ್ ಕೆ ಆರ್ ದೇವಪ್ಪ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ಖಾಸಗಿ ವೈದ್ಯ |
| ವಾಸ | : | ಸಕಲೇಶಪುರ |

ಮುಖ್ಯ ವಿಚಾರಣೆ ಃ ಪಿ.ಪಿ.ರವರಿಂದಃ

ನನಗೆ 1 ನೇ ಆರೋಪಿ ಮತ್ತು ಚಾಸಾ-1 ಗೊತ್ತು. ನಿಶಾನೆ 2 ಮತ್ತು 3 ರ ಮೇಲೆ ನನ್ನ ರುಜು ಇದೆ. ಇದನ್ನು ಕ್ರಮವಾಗಿ ನಿಶಾನೆ 2 ಸಿ ಮತ್ತು ನಿಶಾನೆ 3 ಬಿ ಎಂದು ಗುರುತಿಸಲಾಯಿತು. ಮೇಲ್ಕಂಡ 2 ರುಜುಗಳನ್ನು ಸುಮಾರು 7-8 ವರ್ಷಗಳ ಹಿಂದೆ ಸಕಲೇಶಪುರ ಪೊಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲೀಸರು ಮಾದಕ ದ್ರವ್ಯದ ಬಗ್ಗೆ ಗಲಾಟೆಯಾಗಿದೆ ಎಂದು ಹೇಳಿ ಮೇಲ್ಕಂಡ ರುಜುಗಳನ್ನು ಪಡೆದರು. ನಾನು ರುಜು ಮಾಡಿದ ಸಮಯದಲ್ಲಿ ನನ್ನ ಜೊತೆ ಇನ್ನು ಯಾರು ಯಾರು ಇದ್ದರು ಎಂದು ಈಗ ನೆನಪಿಲ್ಲ. ಸಾಕ್ಷಿ ಮುಂದುವರಿದು ಆ ದಿನ ನನ್ನ ಜೊತೆ ಚಾಸಾ-3 ಇದ್ದರು ಎಂದು ನುಡಿದಿರುತ್ತಾರೆ. ಪೋಲೀಸರು ನನ್ನನ್ನು 1 ನೇ ಆರೋಪಿಯ ಔಷಧಿಯ ಅಂಗಡಿಗೆ ಕರೆದುಕೊಂಡು ಹೋದ್ದರೋ ಇಲ್ಲವೂ ಗೊತ್ತಿಲ್ಲ. ಆ ದಿನ ನನ್ನ ಜೊತೆ ಚಾಸ-1 ಇದ್ದರೋ ಇಲ್ಲವೂ ಎಂದು ಈಗ ನನಗೆ ನೆನಪಿಲ್ಲ. ಆ ದಿನ ಪೊಲೀಸರು 1 ನೇ ಆರೋಪಿಯ ಔಷಧಿಯ ಅಂಗಡಿಯಿಂದ ಯಾವುದೇ ವಸ್ತುಗಳನ್ನು ಅಮಾನುತ್ತು ಪಡಿಸಿದರೋ ಇಲ್ಲವೂ ನನಗೆ ಗೊತ್ತಿಲ್ಲ . ನಿಶಾನೆ ಪಿ 2 ಮತ್ತು 3 ರಲ್ಲಿ ಏನು ಬರೆದಿದೆ ಎಂದು ನನಗೆ ಮರೆತುಹೋಗಿದೆ. ಈ ಘಟನೆ ಬಗ್ಗೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿದ್ದಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಮಾನ್ಯ ವಿಶೇಷ ಪಿಪಿ ಯವರಿಂದಃ

ದಿಃ 22-10-2009 ರಂದು ನನ್ನನ್ನು ಮತ್ತು ಚಾಸಾ-1 ರವರನ್ನು 1 ನೇ ಆರೋಪಿಗೆ ಸಂಬಂಧಿಸಿದ ಸಕಲೇಶಪುರ ಟೌನ್ ಬಿ ಎಂ ರಸ್ತೆಯ ಪಕ್ಕದಲ್ಲಿ ಎನ್ ಎಸ್ ಮೆಡಿಕಲ್ ಮುಂಭಾಗ ನಮ್ಮನ್ನು ಕರೆಸಿ ಚಾಸಾ-1 ರವರು ತೋರಿಸಿದ ಮೇರೆಗೆ 1 ನೇ ಆರೋಪಿಯ ಸಮಕ್ಷಮ ಈ ಘಟನೆ ನಡೆದ ಸ್ಥಳವೆಂದು ಹೇಳಿ ನನ್ನ ಸಮಕ್ಷಮ ನಿಶಾನೆ ಪಿ2 ರಡಿ ಇರುವ ಮಹಜರ್ ನ್ನು ಬರೆದು ಓದಿ ಹೇಳಿ ಅದೇ ಸ್ಥಳದಲ್ಲಿ ನನ್ನ ರುಜು ಪಡೆದಿದ್ದಾರೆ ಎಂದು ಹೇಳುವ ಸಲಹೆಗಳು ಸುಳ್ಳು .

ದಿಃ 22-10-2009 ರಂದು ನಮ್ಮ ಸಮಕ್ಷಮ 1 ನೇ ಆರೋಪಿಯ ಎನ್ ಎಸ್ ಮೆಡಿಕಲ್ ಅಂಗಡಿಯಿಂದ 3 ಸಿ.ಪಿ.ಯು ಗಳನ್ನು ಅಮಾನತ್ತು ಪಡಿಸಿ ನಿಶಾನೆ ಪಿ 3 ರಡಿ ಇರುವ ಮಹಜರ್ ನ್ನು ಬರೆದು ಓದಿ ಹೇಳಿ ಅದೇ ಸ್ಥಳದಲ್ಲಿ ನನ್ನ ರುಜು ಪಡೆದಿದ್ದಾರೆ ಎಂದು ಹೇಳುವ ಸಲಹೆಗಳು ಸುಳ್ಳು. ನನಗೆ ಪ್ರಕರಣದ ಎಲ್ಲ ವಿಷಯಗಳು ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಪಾಟಿ ಸಾವಲು ಃ 1 ಮತ್ತು 2 ನೇ ಆರೋಪಿ ಪರಃ

ಏನು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ ಇದೆ

ಪ್ರಧಾನ ಸೆಷನ್ಸ್ ನ್ಯಾಯಾಧೀಶರು,
ಹಾಸನ.

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಎಸ್ ಸಿ ನಂಃ 232/2014

ಚಾ.ಸಾ- 31 ಪ್ರಾ.ಸಾ - 29 ದಿನಾಂಕಃ 13.03.2018
ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಹೆಸರು | : | ಕೃಷ್ಣಪ್ಪ ಎಂ ಜಿ |
| ತಂದೆಯ ಹೆಸರು | : | ಲೇಟ್ ಗಿರಿಯಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪಿ.ಐ ಸಿಸಿಬಿ ಮೈಸೂರು |
| ವಾಸ | : | ಮೈಸೂರು |

ಮುಖ್ಯ ವಿಚಾರಣೆ ಃ ಸ್ಪೆಷಲ್ ಪಿ.ಪಿ.ರವರಿಂದಃ

ನಾನು 28.10.2013 ರಿಂದ 12.05.2015 ರವರೆಗೂ ಹೊಳೆನರಸೀಪುರ ವೃತ್ತ ನಿರೀಕ್ಷಕನಾಗಿ ಕರ್ತವ್ಯದಲ್ಲಿದ್ದೆ.

ದಿನಾಂಕ 23.02.2014 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡಿದ್ದೇನೆ. ನಾನು ತನಿಖೆಯನ್ನು ವಹಿಸಿಕೊಂಡಾಗ ಈ ಪ್ರಕರಣದ ಪ್ರ.ವ.ವರದಿ ನೋಂದಣಿಯಾಗಿತ್ತು. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಶ್ವಾನದಳವನ್ನು ಕರೆಯಿಸಿ

ಪರಿಶೀಲನೆ ನಡೆಸಿದ್ದೇನೆ. ಶವ ಅದೇ ಸ್ಥಳದಲ್ಲಿತ್ತು. ಶವದ ಪ್ಯಾಂಟ್ ಜೇಬಿನಲ್ಲಿ ಒಂದು ಪರ್ಸ್ ಸಿಕ್ಕಿದ್ದು ಅದರಲ್ಲಿ ಒಂದು ಚೀಟಿಯಿದ್ದು ಅದರಲ್ಲಿ "ಸಾಧಿಕ್ ಷರೀಫ್ ಬಿನ್ ಅಬ್ಸರ್ ಷರೀಫ್ ಹೊಳೆನರಸೀಪುರ" ಎಂದು ಇತ್ತು. ಆ ವಿಳಾಸದ ಆಧಾರದ ಮೇರೆಗೆ ಸಂಬಂಧಪಟ್ಟ ವ್ಯಕ್ತಿಗಳಿಗೆ ವಿಷಯವನ್ನು ತಿಳಿಸಿದೆವು. ಸ್ಥಳಕ್ಕೆ ಬಂದ ಸಂಬಧಿಕರು ಶವವನ್ನು ಗುರುತಿಸಿದರು.

ನಂತರ ಪಂಚರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರ ಸಮಕ್ಷಮ ಶವತನಿಖೆಯನ್ನು ನಡೆಸಿದೆ. ಶವತನಿಖೆಯು ನಿಪಿ 4 ಆಗಿದ್ದು ನನ್ನ ರುಜುವನ್ನು ನಿಪಿ 4(ಡಿ) ಗುರುತಿಸಲಾಯಿತು. ಅದೇ ಸಮಯದಲ್ಲಿ ಫ್ರಾಸಾ 5 ರಿಂದ 9 ರವರ ಹೇಳಿಕೆಗಳನ್ನು ಮಾಡಿರುತ್ತೇನೆ. ಆ ನಂತರ ಫ್ರಾಸಾ24 ರವರ ಮೂಲಕ ಶವವನ್ನು ಶವಪರೀಕ್ಷೆಗಾಗಿ ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆ . ಅದೇ ದಿನ ಪಂಚರನ್ನು ಸ್ಥಳಕ್ಕೆ ಬರಮಾಡಿಕೊಂಡು ನಿಪಿ 2 ರಡಿಯಿರುವ ಸ್ಥಳ ಕೃತ್ಯ ನಡೆದ ಸ್ಥಳದ ಮಹಜರನ್ನು ತಯಾರಿಸಿದ್ದೇನೆ. ನಿಪಿ2 ರಲ್ಲಿರುವ ನನ್ನ ಸಹಿಯನ್ನು ನಿಪಿ2(ಡಿ) ಎಂದು ಗುರುತಿಸಲಾಯಿತು. ಸ್ಥಳದಿಂದ ರಕ್ತದ ಕಲೆಯಿರುವ ಒಂದು ಕಾಡು ಕಲ್ಲು, ಸ್ಥಳದಲ್ಲಿ ದೊರೆತ ರಕ್ತಮಿಶ್ರಿತ ಮಣ್ಣು ಮತ್ತು ರಕ್ತವಿಲ್ಲದ ಮಣ್ಣು ಮತ್ತು ಒಂದು ಕೈಗಡಿಯಾರ ಇವುಗಳನ್ನು ಅಮಾನತುಪಡಿಸಿದ್ದೇನೆ. ಸದರಿ ವಸ್ತುಗಳು ಮುಮಾ 7 ರಿಂದ 9 ಆಗಿದೆ. ಅದೇ ದಿನ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರಿಸಿದ್ದೇನೆ. ಅದೇ ದಿನ ಫ್ರಾಸಾ 24 ರವರು ಶವವನ್ನು ವಾರಸುದಾರರಿಗೆ ಕೊಟ್ಟ ಬಗ್ಗೆ ರಸೀದಿ, ಶವದ ಮೇಲಿದ್ದ ಬಟ್ಟೆಗಳು, ವಿಸ್ರ ಇವುಗಳನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಮೇಲ್ಕಂಡ ವಸ್ತುಗಳನ್ನು ನಿಪಿ11 ರಡಿಯಿರುವ ಮಹಜರಿನಂತೆ ಅಮಾನತುಪಡಿಸಿರುತ್ತೇನೆ. ನಿಪಿ11 ರಲ್ಲಿ ನನ್ನ ರುಜು ನಿಪಿ11(ಡಿ) ಎಂದು ಗುರುತಿಸಲಾಯಿತು. ಶವದ ಮೇಲಿದ್ದ ಬಟ್ಟೆಗಳು ಮತ್ತು ಶೂ ವನ್ನು ಮುಮಾ 3 ರಿಂದ 6 ಎಂದು ಗುರುತಿಸಿದ್ದು ಸಾಕ್ಷಿಯು ಗುರುತಿಸಿದ್ದಾರೆ.

ಅದೇ ದಿನ ಫ್ರಾಸಾ 13, ಫ್ರಾಸಾ 23, ಫ್ರಾಸಾ 25 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಆರೋಪಿಗಳ ಪತ್ತೆ ಬಗ್ಗೆ ಚಾಸಾ30 ಮತ್ತು ಸಿಬ್ಬಂದಿ ವರ್ಗದವರನ್ನು ನೇಮಿಸಿದ್ದೆ. ದಿನಾಂಕ 24.02.2014 ರಂದು ಫ್ರಾಸಾ 12 ರವರ ಹೇಳಿಕೆ ಮಾಡಿರುತ್ತೇನೆ. ದಿನಾಂಕ 25.02.2014 ರಂದು ಪಿಎಂ ವರದಿಯನ್ನು ಪಡೆದಿರುತ್ತೇನೆ. ಪಿಎಂ ವರದಿ ನಿಪಿ14 ಆಗಿದ್ದು ನನ್ನ ರುಜುವನ್ನು ನಿಪಿ14(ಡಿ) ಎಂದು ಗುರುತಿಸಲಾಯಿತು. ದಿನಾಂಕ 27.02.2014 ರಂದು 11.30 ಗಂಟೆ ಸಮಯದಲ್ಲಿ ಚಾಸಾ30 ರವರು ಒಂದು ವರದಿಯನ್ನು ನೀಡಿ 2 ನೇ ಆರೋಪಿಯನ್ನು ನನ್ನ ಮುಂದೆ ಒಂದು ಆಟೋ ಸಮೇತ ಹಾಜರುಪಡಿಸಿದರು. ಸದರಿ ವರದಿಯನ್ನು ನಿಪಿ22 ಎಂತಲೂ ನನ್ನ ರುಜುವನ್ನು ನಿಪಿ22(ಎ) ಎಂತಲೂ ಗುರುತಿಸಲಾಯಿತು.

2 ನೇ ಆರೋಪಿಯನ್ನು ವಿಚಾರಣೆ ಮಾಡಿ ಆತನ ಸ್ವ ಇಚ್ಛಾ ಹೇಳಿಕೆ ಮಾಡಿರುತ್ತೇನೆ. ನಿಪಿ2 ರ ಸಮಯದಲ್ಲಿ ಅಮಾನತುಪಡಿಸಿದ್ದ ವಾಚ್ ನ್ನು 2 ನೇ ಆರೋಪಿ ತನ್ನದೆಂದು ಗುರುತಿಸಿದ. ಅದೇ ದಿನ ಆಟೋರಿಕ್ಷಾವನ್ನು ನಿಪಿ13 ರಡಿಯಿರುವ ಮಹಜರಿನಂತೆ ಅಮಾನತುಪಡಿಸಿರುತ್ತೇನೆ. ನಿಪಿ13 ರಲ್ಲಿ ನನ್ನ ರುಜುವನ್ನು ನಿಪಿ13(ಸಿ) ಎಂದು ಗುರುತಿಸಲಾಯಿತು. ಅಮಾನತುಪಡಿಸಿದ ಆಟೋರಿಕ್ಷಾ ಮುಮಾ1 ರಂತೆ ಇದೆ.

ದಿನಾಂಕ 27.02.2014 ರಂದು ಫ್ರಾಸಾ 26 ಮತ್ತು ಚಾಸಾ 26 ರವರು ಸುನೀಲ್ ಎಂದರೆ 5 ನೇ ಆರೋಪಿಯನ್ನು ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ನನ್ನ ಮುಂದೆ ಒಂದು ವರದಿಯೊಂದಿಗೆ ಹಾಜರುಪಡಿಸಿದರು. ಸದರಿ ವರದಿಯನ್ನು ನಿಪಿ23 ಎಂತಲೂ ನನ್ನ ರುಜುವನ್ನು ನಿಪಿ23(ಎ) ಎಂದು ಗುರುತಿಸಲಾಯಿತು. 5 ನೇ ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದಿರುತ್ತೇನೆ. ಫ್ರಾಸಾ 28 ರವರು ನೀಡಿದ ಮಾಹಿತಿ ಮೇರೆಗೆ ಹೆಚ್ ಎನ್ ಪುರ ಪಟ್ಟಣದ ನಿಂಗೇಗೌಡರ ಮನೆಯ ಮುಂಭಾಗದಲ್ಲಿ ನಿಂತಿದ್ದ ಆಟೋ ಸಂಖ್ಯೆ ಕೆಎ-13 ಎ-1184 ಇದನ್ನು ಈ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ಖಾತ್ರಿ ಮಾಡಿಕೊಂಡು ನಿಪಿ16 ರಡಿಯಿರುವ ಮಹಜರಿನಂತೆ ಅಮಾನತುಪಡಿಸಿರುತ್ತೇನೆ. ನಿಪಿ16 ರಲ್ಲಿ ನನ್ನ ರುಜುವನ್ನು ನಿಪಿ16(ಇ) ಎಂದು ಗುರುತಿಸಲಾಯಿತು. ಸದರಿ ಆಟೋವನ್ನು ಸಾಕ್ಷಿ ಗುರುತಿಸಿದ್ದು ಇದನ್ನು ಮುಮಾ2 ಎಂದು ಈಗಾಗಲೇ ಗುರುತಿಸಲಾಗಿದೆ. ದಿನಾಂಕ 27.02.2014 ರಂದು 2 ಮತ್ತು 5 ನೇ ಆರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ದಿನ ಫ್ರಾಸಾ 26, ಚಾಸಾ26 ರವರ ಹೇಳಿಕೆಗಳನ್ನು ಮಾಡಿರುತ್ತೇನೆ.

ದಿನಾಂಕ 01.03.2014 ರಂದು ಸಂತೋಷ್ ಅಲಿಯಾಸ್ ಮಾಟ ಅಂದರೆ 1 ನೇ ಆರೋಪಿ ಚಾಸ30 ಮತ್ತು ಸಿಬ್ಬಂದಿ ವರ್ಗದವರು ಒಂದು ವರದಿಯೊಂದಿಗೆ ನನ್ನ ಮುಂದೆ ಮದ್ಯಾಹ್ನ 12 ಗಂಟೆಗೆ ಹಾಜರುಪಡಿಸಿದರು. ಸದರಿ ವರದಿಯನ್ನು ನಿಪಿ24 ಎಂತಲೂ ನನ್ನ ರುಜುವನ್ನು ನಿಪಿ24(ಎ) ಎಂತಲೂ ಗುರುತಿಸಲಾಯಿತು. 1 ನೇ ಆರೋಪಿಯ ಸ್ವಇಚ್ಛಾ ಹೇಳಿಕೆ ಮಾಡಿದ್ದೇನೆ. 1 ನೇ ಆರೋಪಿಯು ತನ್ನ ಆಟೋರಿಕ್ಷಾವನ್ನು ಗುರುತಿಸಿದ್ದಾನೆ. ಅದೇ ದಿನ 1 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿನಾಂಕ 02.03.2014 ರಂದು ಸತೀಶ್ ಅಲಿಯಾಸ್ ಮುಖೇಶ್ ಅಂದರೆ ಸಂತೋಷ್ ಅಲಿಯಾಸ್ ಮಾಟ ಅಂದರೆ 3 ನೇ ಆರೋಪಿ ಕೆ ಆರ್ ನಗರದ ಸರ್ಕಾರಿ ಆಸ್ಪತ್ರೆಯ ಬಳಿ ಓಡಾಡುತ್ತಿದ್ದಾನೆಂದು ಬಂದ ಮಾಹಿತಿ ಮೇರೆಗೆ ನಾನು ಬೇರೊಂದು ಪ್ರಕರಣದ ತನಿಖೆಗಾಗಿ ಹುಣಸೂರು, ಹೆಚ್.ಡಿ ಕೋಟೆಗೆ ಹೋಗಿ ವಾಪಸ್ಸು ಬರುತ್ತಿದ್ದು 3 ನೇ ಆರೋಪಿಯ ಮಾಹಿತಿ ತಿಳಿದ ತಕ್ಷಣ ಆತನನ್ನು

ದಸ್ತಗಿರಿ ಮಾಡಿ ಠಾಣೆಗೆ ಕರೆತಂದೆ. 3 ನೇ ಆರೋಪಿಯ ಸ್ವಇಚ್ಛಾ ಹೇಳಿಕೆ ಮಾಡಿರುತ್ತೇನೆ. ಅದೇ ದಿನ 3 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿನಾಂಕ 03.03.2014 ರಂದು ಪ್ರಾಸಾ 5 ರಿಂದ 7 ರವರ ಮರುಹೇಳಿಕೆಗಳನ್ನು ಮಾಡಿರುತ್ತೇನೆ. ದಿನಾಂಕ 08.03.2014 ರಂದು ಪ್ರಾಸಾ8, ಪ್ರಾಸಾ9, ಪ್ರಾಸಾ12 ಮತ್ತು ಪ್ರಾಸಾ16 ರವರ ಮರುಹೇಳಿಕೆಗಳನ್ನು ಮಾಡಿರುತ್ತೇನೆ. ದಿನಾಂಕ 11.03.2014 ರಂದು ಪ್ರಾಸಾ25 ರವರ ಮೂಲಕ ಅಮಾನತುಪಡಿಸಿದ್ದ ಮಾಲುಗಳನ್ನು ಮೈಸೂರು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಪ್ರಾಸಾ 25 ರವರ ಹೇಳಿಕೆ ಮಾಡಿರುತ್ತೇನೆ.

ದಿನಾಂಕ 03.04.2014 ರಂದು ಬೇರೊಂದು ಪ್ರಕರಣದ ವಿಚಾರಣೆಗಾಗಿ ಹಾಸನ ಜಿಲ್ಲಾ ನ್ಯಾಯಾಲಯಕ್ಕೆ ಬಂದಿದ್ದಾಗ ಬಾತ್ಮೀದಾರರ ಮಾಹಿತಿ ಮೇರೆಗೆ ನಮ್ಮ ಸಿಬ್ಬಂದಿಯವರ ಸಹಾಯದೊಂದಿಗೆ 4 ನೇ ಆರೋಪಿ ರವಿ ವಶಕ್ಕೆ ಪಡೆದುಕೊಂಡು ಆತನನ್ನು ಠಾಣೆಗೆ ಕರೆತಂದು ಸ್ವಇಚ್ಛಾ ಹೇಳಿಕೆ ಮಾಡಿರುತ್ತೇನೆ. ಅದೇ ದಿನ 4 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿನಾಂಕ 30.04.2014 ರಂದು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಲೋಕೋಪಯೋಗಿ ಇಲಾಖೆಗೆ ತಿಳಿಸಿದ್ದು ಅವರು ತಯಾರು ಮಾಡಿಕೊಟ್ಟ ನಕ್ಷೆ ನಿಪಿ 19 ರಂತೆ ಇದ್ದು ಇದರಲ್ಲಿ ನನ್ನ ರುಜು ನಿಪಿ19(ಎ) ಎಂದು ಗುರುತಿಸಲಾಯಿತು. ಅದೇ ದಿನ ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ಹಾಜರುಪಡಿಸುವಂತೆ ಪುರಸಭಾ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿ ಅವರು ನೀಡಿದ ನಿಪಿ18 ರಡಿಯಿರುವ ಆರ್.ಟಿ.ಸಿ ನಕಲನ್ನು ದಿನಾಂಕ 17.05.2014 ರಂದು ಪಡೆದಿರುತ್ತೇನೆ. ನಿಪಿ18 ರಲ್ಲಿ ನನ್ನ ರುಜುವನ್ನು ನಿಪಿ18(ಎ) ಎಂದು ಗುರುತಿಸಲಾಯಿತು. ದಿನಾಂಕ 05.05.2014 ರಂದು ನಿಪಿ20 ರಡಿಯಿರುವ ಎಫ್.ಎಸ್.ಎಲ್ ವರದಿಯನ್ನು ಪಡೆದಿದ್ದು ನನ್ನ ರುಜುವನ್ನು ನಿಪಿ20(ಬಿ) ಎಂದು ಗುರುತಿಸಲಾಯಿತು. ಹೊಟ್ಟೆಯಲ್ಲಿ ವಿಷಕಾರಿ ಅಂಶ ಇದೆಯೋ ಇಲ್ಲವೋ ಎಂಬ ಬಗ್ಗೆ ಎಫ್.ಎಸ್.ಎಲ್ ಗೆ ಕಳುಹಿಸಿದ್ದು ಅವರು ನೀಡಿರುವ ನಿಪಿ17 ರಡಿಯಿರುವ ಅಭಿಪ್ರಾಯವನ್ನು 05.05.2014 ರಂದು ಪಡೆದಿದ್ದು ನನ್ನ ರುಜುವನ್ನು ನಿಪಿ17(ಬಿ) ಎಂದು ಗುರುತಿಸಲಾಯಿತು. ನಿಪಿ14 ರಡಿಯಿರುವ ಪಿಎಂ ವರದಿಯಲ್ಲಿ ವೈದ್ಯರು ಎಫ್.ಎಸ್.ಎಲ್ ಅಭಿಪ್ರಾಯ ಬರುವ ತನಕ ತಮ್ಮ ಅಭಿಪ್ರಾಯವನ್ನು ತಡೆಹಿಡಿದಿದ್ದು ಆ ನಂತರ ಎಫ್.ಎಸ್.ಎಲ್ ವರದಿಯನ್ನು ನೋಡಿ ವೈದ್ಯರು ತಮ್ಮ ಅಭಿಪ್ರಾಯವನ್ನು ನಿಪಿ17 ರಡಿಯಿರುವ ಅಭಿಪ್ರಾಯವನ್ನು ಸೂಚಿಸಿದ್ದಾರೆ. ದಿನಾಂಕ 18.05.2014 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನನ್ನ ಮುಂದೆ ಫ್ರಾಸಾ1 ರವರು ನಿಪಿ3 ರಂತೆ ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ3 ರವರು ನಿಪಿ6 ರಂತೆ, ಫ್ರಾಸಾ4 ರವರು ನಿಪಿ7 ರಂತೆ, ಫ್ರಾಸಾ7 ರವರು ನಿಪಿ8 ಮತ್ತು ನಿಪಿ8(ಎ) ಪ್ರಕಾರ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ9 ರವರು ನಿಪಿ9 ಮತ್ತು ನಿಪಿ9(ಎ) ಪ್ರಕಾರ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ9 ನಿಪಿ10 ಮತ್ತು ನಿಪಿ10(ಎ) ಪ್ರಕಾರ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ12 ರವರು ನಿಪಿ12 ಮತ್ತು ನಿಪಿ12(ಎ) ಪ್ರಕಾರ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ16 ರವರು ನಿಪಿ15 ಪ್ರಕಾರ ಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ15 ರವರು ನಿಪಿ15 ರ ಪ್ರಕಾರ ಹೇಳಿಕೆ ನೀಡಿರುತ್ತಾರೆ. ಸ್ಥಳ ಮಹಜರ್ ಸಮಯದಲ್ಲಿ ಅಮಾನತುಪಡಿಸಿದ್ದ ವಾಚನ್ನು ಈಗ ನೋಡುತ್ತಿದ್ದು ಸಾಕ್ಷಿ ಇದನ್ನು ಗುರುತಿಸಿದ್ದಾರೆ. ಈ ವಾಚನ್ನು ಮುಮಾ 10 ಎಂದು ಗುರುತಿಸಲಾಯಿತು. ನಾನು ದಸ್ತಗಿರಿ ಮಾಡಿದ ಆರೋಪಿಗಳು ನ್ಯಾಯಾಲಯದ ಮುಂದೆ ಇದ್ದು ಸಾಕ್ಷಿ ಗುರುತಿಸಿದ್ದಾರೆ.

ಆರೋಪಿತರ ಪರ ಶ್ರೀ ಸಿ.ಎನ್.ವಿ ವಕೀಲರಿಂದ ಪಾಟೀ ಸವಾಲುಃ

ನಾನು ಮೊದಲ ಬಾರಿ ಶವವನ್ನು ನೋಡಿದ ಸ್ಥಳ ನಿರ್ಜನ ಪ್ರದೇಶ ಎಂದರೆ ಸರಿ. ಶವ ಬಿದ್ದಿದ್ದಂತಹ ಸ್ಥಳಕ್ಕೆ ಆಟೋರಿಕ್ಷಾ ಅಥವಾ ನಾಲ್ಕು ಚಕ್ರದ ವಾಹನಗಳು ಹೋಗಲು ಸಾಧ್ಯವಿಲ್ಲ ಎಂದರೆ ಸರಿ. ಶವವನ್ನು ಗುರುತಿಸಬಹುದಾಗಿತ್ತು. ಶವದ ಪ್ಯಾಂಟ್ ಜೇಬಿನಲ್ಲಿ ಸಿಕ್ಕ ಪರ್ಸ್ ಮತ್ತು ಚೀಟಿಯನ್ನು ನಾನು ಅಮಾನತುಪಡಿಸಿಲ್ಲ. ಮೃತನ ವಿರುದ್ಧ ಹೊಳೆನರಸೀಪುರ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವ ಬಗ್ಗೆ ತನಿಖೆ ನಡೆಸಿಲ್ಲ . ಆರೋಪಿಗಳ ವಿರುದ್ಧವೂ ಬೇರೆ ಕ್ರಿಮಿನಲ್ ಮೊಕದ್ದಮೆಗಳು ಇರುವ ಬಗ್ಗೆ ತನಿಖೆ ಮಾಡಿಲ್ಲ . ನಿಪಿ4 ರಡಿಯಿರುವ ಶವಪಂಚನಾಮೆಯನ್ನು ನಾನು ನಡೆಸಿಲ್ಲ ಎಂದರೆ ಸುಳ್ಳು. ನಿಪಿ2 ರಡಿ ನಾನು ಸ್ಥಳ ಮಹಜರ್ ನಡೆಸಿ ಮುಮಾ7 ರಿಂದ 10 ಇವುಗಳನ್ನು ಅಮಾನತುಪಡಿಸಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸುಳ್ಳು. ಮುಮಾ3 ರಿಂದ 6 ನ್ನು ನಿಪಿ11 ರಡಿ ಅಮಾನತುಪಡಿಸಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸುಳ್ಳು. 1 ರಿಂದ 5 ನೇ ಆರೋಪಿತರನ್ನು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ ವಶಕ್ಕೆ ಪಡೆದು ದಸ್ತಗಿರಿ ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸುಳ್ಳು. ಆರೋಪಿಗಳು ನನ್ನ ಮುಂದೆ ಸ್ವಇಚ್ಛಾ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸುಳ್ಳು. ಚಾಸಾ13 ರವರ ಹೇಳಿಕೆ ಬಿಟ್ಟರೆ ಆರೋಪಿಗಳು ಮತ್ತು ಮೃತನು ಸ್ನೇಹಿತರೋ ಅಥವಾ ಪರಿಚಯಸ್ಥರೋ ಎಂಬ ಬಗ್ಗೆ ಪ್ರತ್ಯೇಕ ತನಿಖೆ ಮಾಡಿಲ್ಲ. ಯಾವುದೇ ವಸ್ತುಗಳನ್ನು ಎಫ್.ಎಸ್.ಎಲ್ ಪರೀಕ್ಷೆಗೆ ಕಳುಹಿಸಿಲ್ಲ ಎಂದರೆ

ಸುಳ್ಳು. ನಮ್ಮ ತನಿಖೆಗೆ ಅನುಕೂಲವಾಗುವ ರೀತಿಯಲ್ಲಿ ಎಫ್.ಎಸ್.ಎಲ್ ವರದಿಯನ್ನು ಸೃಷ್ಟಿ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು.

ನನ್ನ ಮುಂದೆ ಫ್ರಾಸಾ1 ರವರು ನಿಪಿ3 ರಂತೆ ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ3 ರವರು ನಿಪಿ6 ರಂತೆ, ಫ್ರಾಸಾ4 ರವರು ನಿಪಿ7 ರಂತೆ, ಫ್ರಾಸಾ7 ರವರು ನಿಪಿ8 ಮತ್ತು ನಿಪಿ8(ಎ) ಪ್ರಕಾರ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ9 ರವರು ನಿಪಿ9 ಮತ್ತು ನಿಪಿ9(ಎ) ಪ್ರಕಾರ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ9 ನಿಪಿ10 ಮತ್ತು ನಿಪಿ10(ಎ) ಪ್ರಕಾರ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ12 ರವರು ನಿಪಿ12 ಮತ್ತು ನಿಪಿ12(ಎ) ಪ್ರಕಾರ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ16 ರವರು ನಿಪಿ15 ಪ್ರಕಾರ ಹೇಳಿಕೆ ನೀಡಿರುತ್ತಾರೆ. ನನ್ನ ಮುಂದೆ ಫ್ರಾಸಾ15 ರವರು ನಿಪಿ15 ರ ಪ್ರಕಾರ ಹೇಳಿಕೆ ನೀಡಿರುತ್ತಾರೆ. ಮೇಲ್ಕಂಡ ಸಾಕ್ಷಿದಾರರು ನನ್ನ ಮುಂದೆ ಮೇಲ್ಕಂಡ ನಿಶಾನೆಯಡಿ ಹೇಳಿಕೆಗಳನ್ನು ಮತ್ತು ಮರುಹೇಳಿಕೆಗಳನ್ನು ನೀಡಿದ್ದಾರೆಂದು ಸುಳ್ಳು ಹೇಳಿದ್ದೇನೆ ಎಂದರೆ ಸುಳ್ಳು. ಆರೋಪಿಗಳ ವಿರುದ್ಧ ಯಾವುದೇ ಸಾಕ್ಷ್ಯ ದೊರೆಯದಿದ್ದರೂ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ ಇದೆ**

**ಪ್ರಧಾನ ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |
|---|

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಎಸ್ ಸಿ ನಂಃ 232/14

ಚಾ.ಸಾ-30 ಪ್ರಾ.ಸಾ - 30 ದಿನಾಂಕಃ **17.04.2018**

ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಹೆಸರು | : | ಶಿವಕುಮಾರ ಪಿ |
| ತಂದೆಯ ಹೆಸರು | : | ಪದ್ಮರಾಜೇಗೌಡ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಪಿ.ಎಸ್.ಐ ತಲೆಘಟ್ಟಪುರ ಪೊ.ಠಾಣೆ ಬೆಂಗಳೂರು |
| ವಾಸ | : | ಬೆಂಗಳೂರು |

ಮುಖ್ಯ ವಿಚಾರಣೆ ಃ ಸ್ಪೆಷಲ್ ಪಿ.ಪಿ.ರವರಿಂದಃ

ನಾನು 25.09.2012 ರಿಂದ 22.10.2014 ರವರೆಗೂ ಹೊಳೆನರಸೀಪುರ ನಗರ ಪೊಲೀಸ್ ಠಾಣೆಯಲ್ಲಿ ಉಪನಿರೀಕ್ಷಕನಾಗಿ ಕರ್ತವ್ಯದಲ್ಲಿದ್ದೆ.

ದಿನಾಂಕ 23.02.2014 ರಂದು ಬೆಳಿಗ್ಗೆ 8 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ 56/14 ರಲ್ಲಿ ಪ್ರಕರಣವನ್ನು ನೋಂದಾಯಿಸಿ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ರವಾನಿಸಿದೆ. ನಿಪಿ-1 ಸದರಿ ದೂರು ಆಗಿದ್ದು ನನ್ನ ರುಜುವನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಪ್ರ

ವ ವರದಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಗಿದೆ. ಇದರಲ್ಲಿ ನನ್ನ ರುಜುವನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-31 ರವರಿಗೆ ವಹಿಸಿರುತ್ತೇನೆ.

ದಿನಾಂಕ 27.02.2014 ರಂದು ನನ್ನನ್ನು ಮತ್ತು ನಮ್ಮ ಸಿಬ್ಬಂದಿಯವರನ್ನು ಆರೋಪಿಗಳ ಪತ್ತೆಗಾಗಿ ನೇಮಿಸಲಾಗಿತ್ತು. ಅದರಂತೆ ಆ ದಿನ ಅರಕಲಗೂಡು ರಸ್ತೆ, ಚಿಟ್ಟನಹಳ್ಳಿ ವೃತ್ತದ ಬಳಿ ಗಸ್ತು ಮಾಡುತ್ತಿದ್ದಾಗ ದೊರೆತ ಮಾಹಿತಿಯಂತೆ ಚಿಟ್ಟನಹಳ್ಳಿ ವೃತ್ತದ ಬಳಿ ಬರುತ್ತಿದ್ದ ಕೆಎ-46-2763 ಸಂಖ್ಯೆ ಆಟೋವನ್ನು ನಿಲ್ಲಿಸಿ ವಿಚಾರಿಸಿದಾಗ ಆಟೋ ಚಾಲನೆ ಮಾಡುತ್ತಿದ್ದ ವ್ಯಕ್ತಿ ಈ ಪ್ರಕರಣದ ಆರೋಪಿ ಎಂದು ತಿಳಿದು ಬಂದು ಆತನ ಹೆಸರು ಕೇಳಲಾಗಿ ನಟರಾಜ್ ಬಿನ್ ವೇಣುಗೋಪಾಲ್ ಎಂದು ನರಸಿಂಹರಾಜ ನಗರ, ಹೊಳೆನರಸೀಪುರ ಎಂದು ತಿಳಿದುಬಂತು. ಸದರಿ ಆರೋಪಿ ಮತ್ತು ಆಟೋ ಸಮೇತ ಅದೇ ದಿನ ಬೆಳಿಗ್ಗೆ 11.30 ರ ಸಮಯಕ್ಕೆ ಚಾಸಾ-31 ರವರ ಮುಂದೆ ಒಂದು ವರದಿ ನೀಡಿ ಹಾಜರುಪಡಿಸಿರುತ್ತೇನೆ. ವರದಿ ನಿಪಿ-22 ಆಗಿದ್ದು ನನ್ನ ರುಜುವನ್ನು ನಿಪಿ-22(ಬಿ) ಎಂದು ಗುರುತಿಸಲಾಯಿತು. ದಿನಾಂಕ 01-03-2014 ರಂದು ನನಗೂ ಮತ್ತು ಸಿಬ್ಬಂದಿಯವರಿಗೆ ಇತರೆ ಆರೋಪಿಗಳ ಪತ್ತೆಗಾಗಿ ಕರ್ತವ್ಯ ನೇಮಿಸಲಾಗಿತ್ತು. ಅದರಂತೆ ಅದೇ ದಿನ ಈ ಪ್ರಕರಣದ 1 ನೇ ಆರೋಪಿ ಸಂತೋಷ ಅಲಿಯಾಸ್ ಮಾಟ ಕುಕ್ಕೇಸುಬ್ರಹ್ಮಣ್ಯದಲ್ಲಿ ಇದ್ದಾನೆಂದು ತಿಳಿದು ಬಂದ ಮೇರೆಗೆ ಖಾಸಗಿ ವಾಹನ ಸಂಖೆ ಕೆಎ-13 ಎನ್-0651 ಅದರಲ್ಲಿ ಹೊರಟು ಕುಕ್ಕೇಸುಬ್ರಹ್ಮಣ್ಯ ದೇವಸ್ಥಾನದ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದಾಗ ನಮ್ಮ ಬಳಿಯಿದ್ದ ಭಾವಚಿತ್ರದಲ್ಲಿದ್ದ ವ್ಯಕ್ತಿಯು ಅದೇ ರಸ್ತೆಯಲ್ಲಿ ಬರುತ್ತಿದ್ದು ಅವನನ್ನು ಅವನನ್ನು ಹಿಡಿದು ವಿಚಾರಿಸಿದಾಗ ಆತನ ಹೆಸರು ಸಂತೋಷ ಅಲಿಯಾಸ್ ಮಾಟ ಬಿನ್ ಮಂಜುನಾಥ, ಆಟೋ ಚಾಲಕ, ಹೊಳೆನರಸೀಪುರ ಎಂದು ತಿಳಿದು ಬಂತು. ಅದೇ ದಿನ ಮಧ್ಯಾಹ್ನ 12 ಗಂಟೆ ಸಮಯಕ್ಕೆ ಆರೋಪಿಯನ್ನು ಚಾಸಾ-31 ರವರ ಮುಂದೆ ಒಂದು ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ವರದಿ ನಿಪಿ-24 ಇದ್ದು ನನ್ನ ರುಜುವನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ನೇ ಆರೋಪಿ ನಟರಾಜ್ ಎಂದು ಗುರುತಿಸಿದ ವ್ಯಕ್ತಿಯನ್ನು ಹೆಸರು ಕೇಳಿದಾಗ 3 ನೇ ಆರೋಪಿ ಸತೀಶ ಎಂದು ತಿಳಿದುಬಂದಿದೆ. ಮುಮಾ1 ನ್ನು ಸಾಕ್ಷಿ ಗುರುತಿಸಿದ್ದಾರೆ.

<u>ಆರೋಪಿತರ ಪರ ಶ್ರೀ ಸಿ.ಎನ್.ವಿ ವಕೀಲರಿಂದ ಪಾಟೀ ಸವಾಲುಃ</u>

1 ಮತ್ತು 2 ನೇ ಆರೋಪಿಗಳನ್ನು ನಾನು ಹೇಳಿದ ದಿನ ಮತ್ತು ಸ್ಥಳದಿಂದ ವಶಪಡಿಸಿಕೊಂಡಿಲ್ಲ ಎಂದರೆ ಸುಳ್ಳು. ಮನೆಯಲ್ಲಿದ್ದ 1 ಮತ್ತು 2 ನೇ ಆರೋಪಿಗಳನ್ನು ಕರೆದುಕೊಂಡು ಹೋಗಿ ಚಾಸಾ-30, ಚಾಸಾ-31 ರವರ ಮುಂದೆ ಹಾಜರುಪಡಿಸಿರುತ್ತೇನೆ

ಎಂದರೆ ಸುಳ್ಳು. ಮುಮಾ1 ನ್ನು ಸಹ 2 ನೇ ಆರೋಪಿಯ ಮನೆಯ ಮುಂದಿನಿಂದ ತೆಗೆದುಕೊಂಡು ಹೋಗಿದ್ದೇವೆ ಎಂದರೆ ಸುಳ್ಳು.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ ಇದೆ

ಪ್ರಧಾನ ಸೆಷನ್ಸ್ ನ್ಯಾಯಾಧೀಶರು,
ಹಾಸನ.